VK ವಿಜಯ ಕರ್ನಾಟಕ

**Wednesday 17th April 2024**

**Mr. Santosh RVCE Student cleared UPSC Exam with 641 Rank**

# ದಿನಪತ್ರಿಕೆ ಓದಿದ್ದರ ಫಲ

**ಸಂತೋಷ್ ಶಿರಾಡೋಣ** ವಿಜಯಪುರ



**641ನೇ ರ್‍ಯಾಂಕ್**

ವಿಜಯಪುರದ ಪ್ರತಿಷ್ಠಿತ ನ್ಯಾಯವಾದಿ ಶ್ರೀ ಕಾಂತ ಶಿರಾಡೋಣ ಅವರ ಪುತ್ರ ಸಂತೋಷ್ ಶಿರಾಡೋಣ ಎಂಜಿನಿಯರಿಂಗ್ ಕ್ಯಾಂಪಸ್ ಸಂದರ್ಶನದಲ್ಲಿ ಪ್ರತಿಷ್ಠಿತ ಬಹುರಾಷ್ಟ್ರೀಯ ಸಂಸ್ಥೆ ಮಾರ್ಗನ್ ಸ್ಟ್ಯಾನ್ಲಿಗೆ ಆಯ್ಕೆಯಾಗಿದ್ದರು. ಗರಿಷ್ಠ ಮೊತ್ತದ ಸಂಬಳದ ಪ್ಯಾಕೇಜಿನ ಆಮಿಷವೂ ಇತ್ತು. ಆದರೆ ಅವೆಲ್ಲವನ್ನೂ ಬದಿಗಿಟ್ಟು ನಾಗರಿಕ ಸೇವೆ ಮಾಡಬೇಕೆನ್ನುವ ಹಂಬಲದೊಂದಿಗೆ ಶ್ರೀಕಾಂತ್ ಯುಪಿಎಸ್ಸಿ ಅಧ್ಯಯನ ಮಾಡಲೆಂದೇ ಹೊಸದಿಲ್ಲಿ ಸೇರಿದರು. ಮೂರು ಬಾರಿ ವಿಫಲ ಯತ್ನದ ನಂತರ ನಾಲ್ಕನೇ ಬಾರಿ ಎಲ್ಲವೂ ಕ್ಲಿಯರ್ ಆಗಿ 641ನೇ ರ್‍ಯಾಂಕ್ ಸಾಧನೆ ಮಾಡಿದ್ದಾರೆ. ‘‘ನಿತ್ಯ ಪತ್ರಿಕೆಗಳನ್ನು ತಪ್ಪದೇ ಓದುವುದು, ಪ್ರಸ್ತುತ ವಿದ್ಯಮಾನ ಅರಿಯುವುದು, 9 ಗಂಟೆಗಿಂತಲೂ ಹೆಚ್ಚಿನ ಓದು ಈ ಸಾಧನೆಗೆ ದಾರಿಯಾಯಿತು,’’ ಎನ್ನುತ್ತಾರೆ ಸಂತೋಷ್.

